**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ, ಶಾಹಾಪೂರ .**

**ಸಿ.ಸಿ ನಂಃ 272/2020**

| | | |
|---|---|---|
| ಸಾಕ್ಷಿಯ ಹೆಸರಃ | ಡಾ. ಪ್ರವೀಣಾ | ಪ್ರಾಸಾಃ 08 |
| ತಂದೆ/ಗಂಡನ ಹೆಸರುಃ | ಶಿವಶರಣಪಪ | ಚಾಸಾಃ 09 |
| ವಯಸ್ಸುಃ | 37 ವರ್ಷ | ದಿಃ 20.09.2025 |
| ಉದ್ಯೋಗಃ | ವೈದ್ಯಾಧಿಕಾರಿ | ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ವಾಸ ಸ್ಥಳಃ | ಹುಬ್ಬಳ್ಳಿ | |

ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ

ನಾನು ದಿ.22.10.2018 ರಿಂದ 27.10.2022 ರವರೆಗೆ ಶಹಾಪುರ ಸಾರ್ವಜನಿಕ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 03.09.2019 ರಂದು ಸಾ.07.15 ಗಂಟೆಗೆ ಚಾಸಾ 1 ರವರು ಹಲ್ಲೆಯ ಹಿನ್ನೆಲೆಯಲ್ಲಿ ಚಿಕಿತ್ಸೆಗಾಗಿ ಬಂದಿದ್ದು ಅವರನ್ನು ಪರೀಕ್ಷೆಗೆ ಒಳಪಡಿಸಿದಾಗ ಚಾಸಾ 1 ರವರಿಗೆ ತಲೆಯ ಮೆಲ್ಭಾಗದಲ್ಲಿ 20X0.2 ಸೆ. ಮೀ. ಗಾಯವಾಗಿರುವುದು ಮತ್ತು ತಲೆಯ ಎಡ ಭಾಗದಲ್ಲಿ 1X0.2 ಸೆ.ಮೀ. ಎಲುಬಿನ ಒಳಗಡೆ ಗಾಯವಾಗಿರುವುದು ಕಂಡು ಬಂದಿರುತ್ತದೆ.

ನನ್ನ ಅಭಿಪ್ರಾಯದಂತೆ ಮೇಲಿನ ಗಾಯವು ಸಾದಾ ಸ್ವರೂಪದ ಗಾಯ ಆಗಿರುತ್ತದೆ. ಸದರಿ ಗಾಯದ ಅವಧಿಯು 12 ತಾಸಿನ ಒಳಗಾಗಿರುತ್ತದೆ. ಸದರಿ ಗಾಯವು ಹಲ್ಲೆಯ ಸಂದರ್ಭದಲ್ಲಿ ಆಗಿರುವ ಸಾಧ್ಯತೆ ಆಗಿರುತ್ತದೆ.

ಅದಕ್ಕೆ ಸಂಬಂಧಿಸಿದಂತೆ ನಾನು ಗಾಯದ ಪ್ರಮಾಣ ಪತ್ರ ನೀಡಿರುತ್ತೇನೆ. ಸಾಕ್ಷಿ ನೀಡಿದ ಗಾಯದ ಪ್ರಮಾಣ ಪತ್ರವನ್ನು ನಿಪಿ-4 ಎಂದು, ಸಾಕ್ಷಿಯು ನಿಪಿ-4(ಬಿ) ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿಯ  ಪರವಾಗಿ ಶ್ರೀ  ಟಿ.ಎನ್ .  ವಕೀಲರಿಂದಃ

ಆಸ್ಪತ್ರೆಗೆ ಚಾಸಾ 1 ರವರು ಒಬ್ಬರೆ ಬಂದಿದ್ದರು. ಸಾಮಾನ್ಯವಾಗಿ ಯಾವುದೇ ವ್ಯಕ್ತಿಯು ವಾಹನವನ್ನು ಚಲಾಯಿಸುವಾಗ ತನ್ನಷ್ಟಕ್ಕೆ ತಾನೇ ಘನ ವಸ್ತುವಿನ ಮೇಲೆ ಬಿದಾಗ ಈ ರೀತಿಯ ಗಾಯವು ಆಗುವ ಸಾಧ್ಯತೆ ಇರುತ್ತದೆ ಎಂದರೆ ಸರಿ. ನಾನು ಚಾಸಾ 1 ರವರಿಗೆ ಸಂಬಂಧಿಸಿದಂತೆ ಸುಳ್ಳು ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಃ ಇರುವುದಿಲ್ಲ.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಹೆಚ್ಚುವರಿ ಜೆಎಂಎಫ್‌ಸಿ ನ್ಯಾಯಾಧೀಶರು
ಶಾಹಾಪೂರ.